ಆದರೆ ಇಲ್ಲಿ ನನ್ನ ಮೂರನೇ ಪ್ರಶ್ನೆಗೆ ಉತ್ತರ ಕೊಡುತ್ತಾ ಈ ಪಟ್ಟಿಯಲ್ಲಿ ಮಲಿಯೂರು ಗ್ರಾಮವಂದವನ್ನು ಸೇರಿಸಿಲ್ಲವೆಂದು ಹೇಳಿದ್ದೀರಿ. ಅಂದರೆ ಅಲ್ಲಿಗೆ ವಿದ್ಯುಚ್ಛಕ್ತಿ ಸಿಗುವುದಿಲ್ಲವೆಂದಂ ಅರ್ಥವಾಗುತ್ತದೆ. ಮೈನ್ ಲೈನ್‌ಜಿಗೆ ವಿದ್ಯುಚ್ಛಕ್ತಿ ಸರಬರಾಜನ್ನು ಕೊಟ್ಟಿರುವುದರಿಂದ ಆ ಹರಿಜನ ಬಸ್ತಿಗೂ ಅದನ್ನು ಮುಂದುವರೆಸುವುದು ಬಹಳ ಸುಲಭ. ಆದ್ದರಿಂದ ಇದನ್ನು ಆದಷ್ಟು ಜಾಗ್ರತ ಪರಿಶೀಲನೆ ಮಾಡಿ ಮಾಡಿಸಿಕೊಡುತ್ತೀರಾ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಆಗಬಹುದು, ಅದನ್ನು ಪರಿಶೀಲನೆ ಮಾಡುತ್ತೇನೆ.

Expenditure on Asphalting of Roads in Marconhally Agricultural Colony

551. SRI M. H. JAYAPRAKASH NARAYAN (Sirsi).—Will the Minister for Public Works be pleased to state :—

(*a*) the estimated cost of asphalting the Marconahally Agricultural Colony Village limits of P.W.D. road passing through M.A. Colony and Kunigal Taluk ;

(*b*) the total amount spent so far for asphalating for this road ;

(*c*) the revised estimate prepared by the Executive Engineer, Tumkur, to complete the incomplete works of three furlong to link two channel bridges on either side of the village ;

(*d*) when this long pending work is expected to be completed ?

SRI M. MALLIKARJUNA SWAMY (Minister for Public Works).—

(*a*) Rs. 19,000.

(*b*) Rs. 16,000 spent upto end of April, 1977.

(*c*) Nil.

(*d*) After the rainy season of current year.

ಶ್ರೀ ಎಂ ಎಚ್. ಜಯಪ್ರಕಾಶ್ ನಾರಾಯಣ್.—ಮಾರ್ಕೋನಹಳ್ಳಿ ವ್ಯವಸಾಯ ಕಾಲೋನಿ ಬಳಿ ಇರತಕ್ಕಂಥ ಶಿಂಷಾ ನದಿಗೆ ಒಂದು ಪಿಕಪ್ ಆನ್ನು ಚಂದನಹಳ್ಳಿ ಹತ್ತಿರ ಸರ್. ವಿಜರ್ವಾ ಕಾಲದಲ್ಲಿ ಕಟ್ಟಲಾಗಿತ್ತು. ಆದರೆ ಅದು ಇಲ್ಲಿಯವರೆಗೆ ದುರಸ್ತಿಯಾಗಿಲ್ಲ. ಈ ರಸ್ತೆಗೆ ಟಾರು ಹಾಕುವ ಕೆಲಸದ ಬಗ್ಗೆ ಎರಡು ವರ್ಷಗಳ ಹಿಂದೆ ಅಂದಾಜು ಮಾಡಿಸಿ ಕೆಲಸವನ್ನು ಸಹ ಮಾಡಿಸಿದ್ದೀರಿ. ಸಂತೋಷ ಆದರೆ ಉಳಿದ ಕೆಲಸವನ್ನು ಯಾವಾಗ ಮಾಡಿ ಮುಗಿಸುತ್ತೀರಿ ? ಈಗ ಅಲ್ಲಿ ಟಾರ್ ಡಬ್ಬಗಳು ಮತ್ತು ಇತರೇ ಮೆಟೀರಿಯಲ್ಸ್ ಬಿದ್ದಿವೆ ಅವು ವೇಸ್ಟ್ ಆಗುತ್ತಿವೆ. ಆದ್ದರಿಂದ ಅಲ್ಲಿನ ಅಧಿಕಾರಿಗಳಿಗೆ ತಾವು ಸೂಚನೆ ಕೊಟ್ಟು ಬಾಕಿಕೆಲಸವನ್ನು ಪೂರೈಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ.—ಈ ಮಳೆಗಾಲ ಮುಗಿದ ನಂತರ ಉಳಿದ ಎರಡು ಫರ್ಲಾಂಗ್ ಕೆಲಸವನ್ನು ಮಾಡಿಸಲಾಗುತ್ತದೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೆಗಳು ಮುಗಿದವು.